MYSORE LEGISLATIVE ASSEMBLY

Thursday, 3rd February 1966.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Music Teachers

*Q.—5. SRI C. R. RANGE GOWDA (Magadi).—

Will the Government be pleased to state :—

(*a*) the number of Music Teachers employed in (i) Primary Schools, (ii) Middle Schools, and (iii) other schools in Bangalore District (separate figures for Rural and Urban may be given) ;

(*b*) of them how many are part-time teachers and how many are full-time teachers ;

( ) the scale of prescribed for the part-time as well as full-time teachers ;

(*d*) whether there are any proposals to convert the part-time teachers as full-time teachers ;

(*e*) how many posts of Music Teachers are vacant at present in the above schools ?

A.—SRI S. R. KANTHI (Minister for Education).—

	Bangalore District (Rural)	City District, Bangalore
(*a*) Primary Schools	54	21
Middle Schools	8	10
Other Schools	1	4

	Bangalore District (Rural)		City District Bangalore	
	Part time	*Full time*	*Part time*	*Full time*
(*b*) Primary Schools	52	2	5	16
Middle Schools	2	6	...	10
Other Schools	1	...	...	4

(SRI S. R. KANTHI)

(e) Primary Schools Middle Schools *Part-time* :	Rs. 10 p. m. upto 4 periods per week and an extra allowance at Rs. 2 p. m. for every additional period subject to the tatol allowance being limited to Rs. 30 p. m.	
Full-time :	Rs. 65-00 for non-S. S. L. C. and Rs. 80—150 for S. S. L.Cs., with Music qualifications.	
Other Schools : *Part-time* :	(i) Rs. 30 p. m. for minimum periods of 10 per week and Rs. 2 per additional period in excess of 10 periods. (ii) Rs. 20 p. m. for minimum periods of not less than 5 periods per week. (iii) Rs. 15 p. m. when the number of periods falls below 5 per week.	Same as for Bangalore Rural District.
Pull-time :	Scale Rs. 110-220.	

	Bangalore District (Rural)		City District Bangalore	
	Part time	*Full time*	*Part time*	*Full time*
(d)	No.		No.	
(e) Primary Schools	3	—	1	—
Middle Schools	1	—	—	—
Other Schools	—	—	—	—

ಶ್ರೀ ಸಿ. ಆರ್. ರಂಗೇಗೌಡ.—(ಡಿ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈಚೆಗೆ 3-4 ವರ್ಷ ಸರ್ವೀಸ್ ಆಗಿದ್ದ ಪಾರ್ಟ್-ಟೈಂ ಕ್ವಾಲಿಫೈಡ್ ಟೀಚರ್ಸ್‌ನ್ನು ಸ್ಥಾಯಿ ಮಾಡಿದ್ದೀರಿ, ಅದೇ ರೀತಿಯಲ್ಲಿ, ಕ್ವಾಲಿಫೈಡ್ ಸಂಗೀತದ ಉಪಾಧ್ಯಾಯರುಗಳು ಇದುವರೆಗೂ ಯಾರು 3-4 ವರ್ಷ ಸರ್ವೀಸ್ ಮಾಡಿದ್ದಾರೆ ಅವರನ್ನು ಫುಲ್ ಟೈಂ ಟೀಚರ್ಸ್ ಆಗಿ ಮಾಡುವುದಕ್ಕೆ ಏನೂ ಅಭ್ಯಂತರ ಇಲ್ಲ ಅಲ್ಲವೇ ?

† ಶ್ರೀ ಎಸ್. ಆರ್. ಕಂಠಿ.—ತಾವು ಮಾಡುತ್ತಾ ಇರುವುದು ಒಂದು ಸೂಚನೆ, ತಮ್ಮ ಸೂಚನೆಯನ್ನು ಪರಿಶೀಲಿಸಲಾಗುವುದು.

†Indicates that the remarks of speeches have not been revised by the member concerned.

ಶ್ರೀ ಸಿ. ಆರ್. ರಂಗೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದು ಪ್ರಾಥಮಿಕ ಶಾಲೆ ಅಥವಾ ಮಾಧ್ಯಮಿಕ ಶಾಲೆಗೂ ಸಂಗೀತದ ಉಪಾಧ್ಯಾಯರನ್ನು ಕೊಟ್ಟಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ತಾವು ಇಲ್ಲಿ ಬೆಂಗಳೂರು ಅರ್ಬನ್ ವಿಷಯ ಮಾತ್ರ ಕೇಳುತ್ತಾ ಇದ್ದೀರಿ. ಉತ್ತರದಲ್ಲಿ ಎಷ್ಟು ವೇಕೆನ್ಸಿ ಇದೆ ಎಂದು ಹೇಳಿದೆಯೋ ಅಷ್ಟು ಮಾತ್ರ ಇದೆಯೇ ಹೊರತು ಜಾಸ್ತಿ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಸಂಗೀತದ ಉಪಾಧ್ಯಾಯರುಗಳನ್ನು ನೇಮಕ ಮಾಡುವಾಗ ಕುರುಡರಾಗಿರತಕ್ಕವರು ಸಾಕಾದಷ್ಟು ಪ್ರಾವೀಣ್ಯತೆಯನ್ನು ಪಡೆದಿದ್ದರೆ ಅಂತಹವರನ್ನು ಸಂಗೀತದ ಉಪಾಧ್ಯಾಯರುಗಳ ಜಾಗದಲ್ಲಿ ನೇಮಿಸಿಕೊಳ್ಳುವುದಕ್ಕೆ ಆಲೋಚನೆ ಮಾಡಲಾಗುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಆಲೋಚನೆ ಮಾಡುತ್ತಾ ಇದ್ದೇವೆ. ನಮ್ಮಕ್ಕೆ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ರೂಲ್ಸ್‌ನಲ್ಲಿ ಇದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕುರುಡರು ಎಸ್ಸೆಸ್ಸೆ ಪರೀಕ್ಷೆಗಳನ್ನು ಪಾಸ್‌ಮಾಡಿದರೂ ಕೂಡ ಅವರು ಇನ್ನೆನೂ ಉದ್ಯೋಗಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ತಕ್ಷಣ ಪರಿಶೀಲನೆ ಮಾಡುತ್ತೀರಾ ಅಥವಾ ಎಲ್ಲಾ ವಿಷಯಗಳ ಹಾಗೆ ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಟೈಂ ತೆಗೆದುಕೊಳ್ಳುತ್ತದೆ. ಅವರನ್ನು ಟೀಚರ್ಸ್ ಆಗಿ ಮಾಡುವುದಕ್ಕೆ ಇಂಡಿಯಾ ಸರ್ಕಾರವು ಬೇಡ ಎಂದು ಹೇಳುತ್ತಾ ಇದ್ದಾರೆ. ಏಕೆಂದರೆ ಅವರು ಇಲ್ಲಿ ಶೃತಿ ಪೆಟ್ಟಿಗೆ ಬಾರಿಸುತ್ತಾ ಪಾಠ ಹೇಳುತ್ತಾ ಇದ್ದರೆ ಹುಡುಗರೇ ಇರುವುದಿಲ್ಲ, ಎದ್ದು ಹೊರಟು ಹೋಗಿರುತ್ತಾರೆ. ಆದ್ದರಿಂದ ಅವರನ್ನು ಸಂಗೀತ ಉಪಾಧ್ಯಾಯರನ್ನಾಗಿ ಮಾಡುವುದಕ್ಕೆ ಅನುಮತಿ ಕೊಟ್ಟಿಲ್ಲ. ಕಣ್ಣಿದ್ದವರನ್ನು ಅಸಿಸ್ಟೆಂಟ್ ಟೀಚರ್ಸ್ ಆಗಿ ನೇಮಕ ಮಾಡಿ ಇವರನ್ನು ಸಂಗೀತ ಉಪಾಧ್ಯಾಯರನ್ನಾಗಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—3-4 ಮೈಲಿ ದೂರದಲ್ಲಿರುವ 3-4 ಸ್ಕೂಲುಗಳಿಗೆ ಒಬ್ಬ ಸಂಗೀತದ ಉಪಾಧ್ಯಾಯರನ್ನು ನೇಮಕ ಮಾಡಿದ್ದೀರಿ. ಅವರಿಗೆ ಸೈಕಲ್ ಅಲೋಯನ್ಸ್‌ನ್ನೂ ಕೂಡ ಕೊಡುತ್ತಾ ಇಲ್ಲ, ಅದನ್ನಾದರೂ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್ ಕಂಠಿ.—ಒಂದೇ ಕಡೆ ಒಬ್ಬ ಸಂಗೀತದ ಉಪಾಧ್ಯಾಯರನ್ನು ಫುಲ್ ಟೈಂ ಇಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ವರ್ಕ್ ಲೋಡ್ ಇಲ್ಲ. ಆದ್ದರಿಂದಲೇ ಈ ಪ್ರಕಾರ ಮಾಡ ಬೇಕಾಗಿದೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳಿಗೆ ಸಂಗೀತದ ಉಪಾಧ್ಯಾಯರನ್ನು ನೇಮಕ ಮಾಡುವಾಗ ಅವರಿಗೆ ಇರಬೇಕಾದ ಕ್ವಾಲಿಫಿಕೇಷನ್ ಏನು ?

ಶ್ರೀ ಎಸ್. ಆರ್. ಕಂಠಿ.—ಅದು ಉತ್ತರದಲ್ಲೇ ಇದೆ. 65-90 ನಾನ್-ಎಸ್.ಎಸ್.ಎಲ್.ಸಿ. ಮತ್ತು 80-100 ಎಸ್.ಎಸ್.ಎಲ್.ಸಿ. ಮತ್ತು ಅದರ ಜೊತೆಗೆ ಮ್ಯೂಸಿಕ್ ಕ್ವಾಲಿಫಿಕೇಷನ್.

ಶ್ರೀ ಜಿ. ದುಗ್ಗಪ್ಪ.—ಹಿಂದುಳಿದ ವರ್ಗದವರಿಗೆ ಸಲ್ಲಬೇಕಾದ 18 ಪರ್ಸೆಂಟ್ ಈ ಸಂಗೀತದ ಉಪಾಧ್ಯಾಯರುಗಳ ಹುದ್ದೆಯಲ್ಲಿ ದೊರಕಿಲ್ಲ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಇರುವುದು ಸ್ವಾಭಾವಿಕವಾಗಿದೆ. ಅದಲ್ಲಿ ಉಪಾಧ್ಯಾಯರು ಸಿಕ್ಕರೆ ತಾವು ಹೇಳುವುದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಏನೂ ತೊಂದರೆ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಅರ್ಹರಾದ ಉಪಾಧ್ಯಾಯರುಗಳು ಇದ್ದರೂ ಕೆಲಸಕ್ಕೆ ತೆಗೆದುಕೊಳ್ಳುವುದು ಕಷ್ಟ, ತೆಗೆದುಕೊಳ್ಳುತ್ತಾ ಇಲ್ಲ, ಅರ್ಹರಾದವರು ಇದ್ದರೆ ಅವರನ್ನು ತೆಗೆದುಕೊಳ್ಳುವಾಗ ಇವರಿಗೆ ಪ್ರಾಶಸ್ತ್ಯವನ್ನು ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ತಾವು ಅಂತಹ ಯಾವುದಾದರೂ ನಿದರ್ಶನ ಕೊಟ್ಟರೆ ವಿಚಾರ ಮಾಡುತ್ತೇನೆ. ಕ್ವಾಲಿಫೈಡ್ ಟೀಚರ್ಸ್ ಇದ್ದರೆ ಅವರನ್ನು ರಿಕ್ರೂಟ್ ಮಾಡಿಕೊಳ್ಳ ಬೇಕಾಗುತ್ತದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಎಸ್. ಎಸ್. ಎಲ್. ಸಿ. ಪಾಸ್ ಆಗದೇ ಸಂಗೀತ ವಿದ್ಯಾಭ್ಯಾಸದಲ್ಲಿ ಯಾರಿಗೆ ಅರ್ಹತೆ ಇದೆಯೋ ಅವರನ್ನು ಸೈಸ್ಕೂಲುಗಳಲ್ಲಿ ನೇಮಕ ಮಾಡಿದ್ದು ಅವರಿಗೆ ಪ್ರಮೋಷನ್ ಕೊಡದೇ ಇರುವುದಕ್ಕೆ ಕಾರಣವೇನು ? ಅದಕ್ಕೆ ಏನು ಅಭ್ಯಂತರ ಇದೆ ?

ಶ್ರೀ ಎಸ್. ಆರ್. ಕಂಠಿ.—ನಾನ್ ಎಸ್. ಎಸ್. ಎಲ್. ಸಿ. ಆದವರಿಗೆ ಪ್ರಮೋಷನ್ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಇದುವರೆಗೂ ಯಾರಾದರೂ ಸಂಗೀತದ ಉಪಾಧ್ಯಾಯರನ್ನು ಖಾಯಂ ಮಾಡಲಾಗಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಕೆಲವರಿಗೆ ಖಾಯಂ ಆಗಿವೆ, ಕೆಲವರಿಗೆ ಆಗಿಲ್ಲ. ಇದಕ್ಕೆ ಕಾರಣ ಎಲ್ಲಿ ವರ್ಕ್ ಲೋಡ್ ಕಡಿಮೆ ಇರುತ್ತದೆ ಅಲ್ಲಿ ಫುಲ್ ಟೈಂ ಟೀಚರ್ಸನ್ನು ಇಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇ ಗೌಡ.—ಎಸ್. ಎಸ್. ಎಲ್. ಸಿ. ಕ್ಯಾಲಫಿಕೇಷನ್ ಇರತಕ್ಕ ಮಿಡ್ಲ್ ಸ್ಕೂಲ್ ಉಪಾಧ್ಯಾಯರಿಗೂ 80-150ರ ಗ್ರೇಡು, ಎಸ್. ಎಸ್. ಎಲ್. ಸಿ. ಆದರ ಜೊತೆಗೆ ಮ್ಯೂಸಿಕ್ ಕ್ಯಾಲಫಿಕೇಷನ್ ಇರತಕ್ಕ ಉಪಾಧ್ಯಾಯರಿಗೂ 80-150ರ ಗ್ರೇಡು ಕೊಟ್ಟಿದ್ದೀರಿ, ಆದ್ದರಿಂದ ಎಷ್ಟೋ ಜನ ಮ್ಯೂಸಿಕ್ ಟೀಚರ್ಸ್ ಈ ಕೆಲಸಕ್ಕೆ ಸೇರದೆ ಇರುವುದು ನರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಎಸ್. ಎಸ್. ಎಲ್. ಸಿ. ಆಗಿದ್ದು ಮ್ಯೂಸಿಕ್ ಕ್ಯಾಲಫಿಕೇಷನ್ ಇರಬೇಕೆಂಬ ನಿಯಮ ಇದೆ, ಇಲ್ಲದೆ ಇದ್ದರೆ ಅವರಿಗೆ ಇನ್‌ಕ್ರಿಮೆಂಟ್ ಸಿಕ್ಕುವುದಿಲ್ಲ.

ಶ್ರೀ ಸಿದ್ದಯ್ಯ ಕಾತೀಮತ್.—ಈಗ ಪಾರ್ಟ್ ಟೈಂ ಆಗಿ ಕೆಲಸ ಮಾಡುತ್ತಾ ಇರತಕ್ಕ ಉಪಾಧ್ಯಾಯರನ್ನು ಪ್ರಾಥಮಿಕ ಶಾಲೆಗಳಲ್ಲಿ ಖಾಯಂ ಮ್ಯೂಸಿಕ್ ಟೀಚರ್ಸ್ ಆಗಿ ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ವರ್ಕ್ ಲೋಡ್ ಇದ್ದರೆ ಮಾಡುತ್ತಾರೆ, ಅಲ್ಲಿ ಫುಲ್ ವರ್ಕ್ ಲೋಡ್ ಇರುವುದಿಲ್ಲ.

ಶ್ರೀ ಕೆ. ಪಿ ರೇವಣ್ಣ ಸಿದ್ದಪ್ಪ.—ಕುಂಟರು, ಕುರುಡರನ್ನು ನೇಮಕ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪುವುದಿಲ್ಲ, ಅವರು ಪಾಠ ಹೇಳುತ್ತಾ ಇದ್ದರೆ ಹುಡುಗರು ಎದ್ದು ಹೊರಟು ಹೋಗುತ್ತಾರೆ ಎಂದು ತಾವು ಹೇಳುತ್ತಾ ಇದ್ದೀರಿ, ಸ್ಕೂಲ್‌ನಲ್ಲಿ ಯಾವಾಗಲೂ ಹೆಡ್ ಮಾಸ್ಟರು ಇರುತ್ತಾರೆ, ಅಲ್ಲದೇ ನಮಗಿಂತಲೂ ಬಹಳ ಚುರುಕಾಗಿ ಯಾರು ಏನು ಮಾಡುತ್ತಾರೆ, ಇದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿಯುಕೆಳ್ಳತಕ್ಕ ಶಕ್ತಿ ಕುರುಡರಿಗೆ ಇರುತ್ತದೆ. ಆದ್ದರಿಂದ ಕುರುಡರಿಗೆ ಈ ಒಂದು ಅವಕಾಶವನ್ನು ಕಲ್ಪಿಸಿಕೊಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ನಾನು ಹೇಳಿದ್ದು ನನ್ನ ಡಿಪಾರ್ಟ್‌ಮೆಂಟಿನ ಅನುಭವ, ತಾವು ತಮ್ಮ ಅನುಭವವನ್ನು ಹೇಳುತ್ತಾ ಇದ್ದೀರಿ. ಇಲ್ಲಿ ಇರತಕ್ಕ ಒಂದು ಪ್ರಶ್ನೆ ಏನೆಂದರೆ, ಅವರಿಗೆ ಅಸಿಸ್ಟೆಂಟ್ ಟೀಚರ್ಸನ್ನು ಜೊತೆಗೆ ಕೊಟ್ಟು ಅವರನ್ನು ಮ್ಯೂಸಿಕ್ ಟೀಚರ್ಸ್ ಆಗಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಿ ನೋಡುತ್ತಾ ಇದ್ದೇವೆ.

Policy regarding Supply of Power to I. P. Sets.

*Q.—10. **Sri M. C. BASAPPA** (Chamarajanagar).—

Will the Government be pleased to state:—

(*a*) whether there is any change of policy by the State Electricity Board regarding supply of power to irrigation pumpsets;

(*b*) whether there is any difference in policy between the Crash Programme and the normal programme regarding supply of power to irrigation pumpsets;

(*c*) if there is any difference whether it would make any material alteration in the normal programme?

*A.—**Sri VEERENDRA PATIL** (Minister for Public Works).—

(*a*) The original ceiling limit of Rs. 2500 was reduced in June 1965 fixing generally the ceiling limit at Rs. 600 per H. P. schemes, costing more than Rs. 600 per H. P. being considered by the Board. However, this ceiling limit has since been removed by the Board in its order issued in December 1965 and the *status quo ante* restored.